# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಬಿ.ಡಿ-4551/2015/ಡಿಆರ್ಇ-5

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀಧಿ,
ಬೆಂಗಳೂರು-560 001,
ದಿನಾಂಕ:28-02-2018

***ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1)ರ ಅನ್ವಯ ವರದಿ***

ವಿಷಯ: ಶ್ರೀ ಎನ್. ಶಿವನಾಗಸ್ವಾಮಿ, ಹಿಂದೂ-ಮುಸ್ಲಿಂ ಗುರುಮಠ, ಐಜೂರು ಗುಡ್ಡೆ, ರಾಮನಗರ ಪಟ್ಟಣ ನಿವಾಸಿ ಇವರು ಸಲ್ಲಿಸಿರುವ ದೂರಿನ ಬಗ್ಗೆ.

****

ಈ ದೂರನ್ನು ಶ್ರೀ ಎನ್. ಶಿವನಾಗಸ್ವಾಮಿ, ಹಿಂದೂ-ಮುಸ್ಲಿಂ ಗುರುಮಠ, ಐಜೂರು ಗುಡ್ಡೆ, ರಾಮನಗರ ಪಟ್ಟಣ ನಿವಾಸಿ **(ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ)** ಇವರು ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ರಾಮನಗರ **(ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ)** ರವರ ವಿರುದ್ಧ ದಾಖಲಿಸಿ ಕರ್ನಾಟಕ ಲೋಕಾಯುಕ್ತ ಅಧಿನಿಯಮದಡಿ ತನಿಖೆಗಾಗಿ ಕೈಗೆತ್ತಿಕೊಳ್ಳಲಾಯಿತು.

2. **ದೂರಿನ ಸಂಕ್ಷಿಪ್ತ ವಿವರ:**

ಮಾಹಿತಿ ಹಕ್ಕು ಅಧಿನಿಯಮದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ರಾಮನಗರ ಪೌರಾಯುಕ್ತರ ಕಛೇರಿಯಲ್ಲಿ ಹಲವಾರು ಅಕ್ರಮ ಖಾತೆಗಳು ಇರುವ ಬಗ್ಗೆ ಮಾಹಿತಿಯನ್ನು ಕೊಡುವಂತೆ ಕೋರಿದ್ದರೂ ಸಹ ನನಗೆ ಒದಗಿಸಿಲ್ಲ. ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಲಾಗಿ, ಎದುರುದಾರರಿಗೆ ವಿವರಣೆಗಳನ್ನು ಕೊಡಲು ನಿರ್ದೇಶಿಸಿದ್ದಾರೆ. ಆದ್ದರಿಂದ, ಎದುರದಾರರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂದು ಕೋರಿರುತ್ತಾರೆ.

3. ಈ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಗಳನ್ನು ಕೇಳಲಾಗಿದೆ.

(ಎ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ತಾವು ಜಿಲ್ಲಾಧಿಕಾರಿಗಳಿಗೆ ವಿಸ್ತೃತವಾದ ವರದಿಯನ್ನು ಕಳುಹಿಸಿದ್ದು ಅದರ ಪ್ರತಿಯನ್ನು ಮಾಹಿತಿ ಹಕ್ಕು ಅಧಿನಿಯಮದ ಅಡಿಯಲ್ಲಿ ದೂರುದಾರರಿಗೆ ಮತ್ತು ಇನ್ನೊಂದು ಪ್ರತಿಯನ್ನು ಈ ಸಂಸ್ಥೆಗೆ ಸಲ್ಲಿಸಿರುವುದಾಗಿ ತಿಳಿಸಿದ್ದಾರೆ.

4. ಎದುರುದಾರರು ಸಲ್ಲಿಸಿರುವ ವರದಿಯನ್ನು ಪರಿಶೀಲಿಸಲಾಗಿ 1,505 ಅಕ್ರಮ ಖಾತೆಗಳು ನಗರ ಸಭೆಯ ದಾಖಲೆಗಳಲ್ಲಿವೆ ಮತ್ತು ಆ ಸಮಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅಧಿಕಾರ

ಹೆಸರುಗಳನ್ನು ಸಹ ಉಲ್ಲೇಖಿಸಿದ್ದಾರೆ. ಆದರೆ ಜಿಲ್ಲಾಧಿಕಾರಿಗಳು ಈ ಬಗ್ಗೆ ಯಾವುದಾದರೂ ಯಾವುದಾದರೂ ಕ್ರಮವನ್ನು ಕೈಗೊಂಡಿದ್ದಾರೆಯೇ ಎನ್ನುವ ಬಗ್ಗೆ ಕಂಡುಬರುವುದಿಲ್ಲ. ಆದ್ದರಿಂದ, ಜಿಲ್ಲಾಧಿಕಾರಿಗಳು ರಾಮನಗರ ಇವರಿಗೆ ಪತ್ರವನ್ನು ಬರೆದು ಎದುರುದಾರರು ಸಲ್ಲಿಸಿರುವ ವರದಿಯ ಮೇಲೆ ಏನು ಕ್ರಮವನ್ನು ಕೈಗೊಳ್ಳಲಾಗಿದೆ ಎನ್ನುವ ಬಗ್ಗೆ ವಿವರಗಳನ್ನು ಸಲ್ಲಿಸಲು ಸೂಚಿಸಲಾಗಿತ್ತು.

5. ದಿನಾಂಕ: 23-11-2016 ರಿಂದ 16-12-2016 ರವರೆಗೆ ಯಾವುದೇ ವರದಿ ಸ್ವೀಕೃತವಾಗಲಿಲ್ಲ. ದಿನಾಂಕ: 24-1-2017 ರಂದು ಜಿಲ್ಲಾಧಿಕಾರಿಗಳು ರಾಮನಗರ ಜಿಲ್ಲೆ ಇವರು ಪತ್ರವನ್ನು ಸಲ್ಲಿಸಿದ್ದು, ತನಿಖಾ ತಂಡವು ಸಲ್ಲಿಸಿದ್ದ ವರದಿಯ ಮೇಲೆ ಹೆಚ್ಚುವರಿ ವರದಿಯನ್ನು ನಿರೀಕ್ಷಿಸಲಾಗುತ್ತಿದೆ. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ಇವರಿಗೆ ಪತ್ರವನ್ನು ಬರೆಯಲಾಗಿದೆ ಅಂತ ತಿಳಿಸಿದ್ದರಿಂದ, ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಪತ್ರವನ್ನು ಬರೆದು ತನಿಖಾ ತಂಡದ ವರದಿಯ ಮೇಲೆ ಏನು ಕ್ರಮವನ್ನು ಕೈಗೊಳ್ಳಲಾಗಿದೆ ಎನ್ನುವ ಬಗ್ಗೆ ವಿವರಣೆಯನ್ನು ಕೇಳಲಾಗಿತ್ತು.

6. ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರು ಅನುಪಾಲನಾ ವರದಿಯನ್ನು ಸಲ್ಲಿಸಲು ಕಾಲಾವಕಾಶವನ್ನು ಕೋರಿಕೊಂಡಿದ್ದರು. ದಿನಾಂಕ: 9-11-2017 ರಂದು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರ ಪರವಾಗಿ ಕಛೇರಿಯ ಸ್ಥಾನಿಕ ಸಹಾಯಕರಾದ ಶ್ರೀ ಟಿ.ಎಸ್. ರಮೇಶ ಇವರು ಖುದ್ದು ಹಾಜರಾಗಿ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ ನಿಯಮ ಉಲ್ಲಂಘನೆಗೆ ಕಾರಣರಾದ 6 ಜನ ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಸಂಬಂಧ ಅನುಬಂದ-1 ರಿಂದ 4ರ ವರೆಗಿನ ದೋಷಾರೋಪಣ ಪಟ್ಟಿಯನ್ನು ಸಿದ್ಧಪಡಿಸಿ ಸಲ್ಲಿಸಲು ಜಿಲ್ಲಾಧಿಕಾರಿಗಳು ರಾಮನಗರ ಜಿಲ್ಲೆ ಇವರಿಗೆ ಕೋರಲಾಗಿತ್ತು. ದೋಷಾರೋಪಣ ಪಟ್ಟಿ ಸ್ವೀಕೃತವಾಗಿರುತ್ತದೆ.

7. ಅನಧಿಕೃತ ಮತ್ತು ನಿಯಮಬಾಹಿರವಾಗಿ ಖಾತೆ ಸಂಖ್ಯೆ ನಮೂದಿಸಿದ ಪ್ರಕರಣಗಳಿಗೆ ಸಂಬಂಧಿಸಿದಂತೆ ಮೂಲ ಮಾಲಿಕತ್ವದ ಬಗ್ಗೆ ನಿಯಮಾನುಸಾರ ಪರಿಶೀಲಿಸಿ ನಿಯಮಗಳ ಉಲ್ಲಂಘನೆಯಾದ ಪ್ರಕರಣಗಳಲ್ಲಿ ಖಾತೆಗಳನ್ನು ರದ್ದುಪಡಿಸಲು ಅಗತ್ಯ ಕ್ರಮ ಕೈಗೊಳ್ಳಲು ಜಿಲ್ಲಾಧಿಕಾರಿಗಳನ್ನು ಕೋರಲಾಗಿರುತ್ತದೆ ಅಂತ ವರದಿಯನ್ನು ಸಲ್ಲಿಸಿದ್ದಾರೆ.

8. ದಿನಾಂಕ: 26-12-2017 ರಂದು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರ ಪರವಾಗಿ ಕಛೇರಿಯ ಸ್ಥಾನಿಕ ಸಹಾಯಕರಾದ ಶ್ರೀ ಟಿ.ಎಸ್. ರಮೇಶ ಇವರು ಖುದ್ದು ಹಾಜರಾಗಿ ವರದಿಯನ್ನು ಸಲ್ಲಿಸಿದ್ದು, ಅದರಲ್ಲಿ 6 ಜನ ಆಪಾದಿತ ನೌಕರರಲ್ಲಿ 4 ಜನರ ವಿರುದ್ಧ ಅನುಬಂಧ-1 ರಿಂದ 4 ಅನ್ನು ಕಳುಹಿಸಲಾಗಿದೆ. ಜಿಲ್ಲಾಧಿಕಾರಿಗಳು ರಾಮನಗರ ಜಿಲ್ಲೆ

2

ಇವರು ನಿಯಮ ಉಲ್ಲಂಘನೆ ಆಗಿರುವ ಖಾತೆಗಳನ್ನು ರದ್ದುಪಡಿಸಲು ಕ್ರಮವನ್ನು ಕೈಗೊಳ್ಳಲು ಸೂಚಿಸಲಾಗಿದೆ ಅಂತ ವರದಿಯನ್ನು ಸಲ್ಲಿಸಿದ್ದಾರೆ.

9. ದಿನಾಂಕ: 26-12-2017 ರಂದೇ ಅಕ್ರಮ ಖಾತೆಗಳನ್ನು ತೆಗೆಯುವುದು ರಾಮನಗರ ಪಟ್ಟಣ ವ್ಯಾಪ್ತಿಯಲ್ಲಿ ಮತ್ತು ಸುತ್ತಮುತ್ತಲಿನ ಪಟ್ಟಣಗಳಿಗೆ ಹತ್ತಿರ ಇರುವ ಸ್ಥಳಗಳಲ್ಲಿ ಸಾಮಾನ್ಯವಾಗಿದೆ ಅಂತ ತಿಳಿಸಿದ್ದಾರೆ. ಈ ಬಗ್ಗೆ ಸುತ್ತೋಲೆಯನ್ನು ಹೊರಡಿಸಿ ಸಂಬಂಧಪಟ್ಟ ಡಿ.ಎಂ.ಎ. ಗಳಿಗೆ ನಿರ್ದೇಶನವನ್ನು ಕೊಟ್ಟು ನಿಯಮಬಾಹಿರವಾಗಿ ತೆಗೆದಿರುವ ಖಾತೆಗಳನ್ನು ರದ್ದುಪಡಿಸಲು ಸುತ್ತೋಲೆಯನ್ನು ಹೊರಡಿಸಲಾಗುತ್ತದೆ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರ ಪರವಾಗಿ ಕಛೇರಿಯ ಸ್ಥಾನಿಕ ಸಹಾಯಕರಾದ ಶ್ರೀ ಬಿ.ಎಸ್. ರಮೇಶ ಇವರು ಅಂತ ತಿಳಿಸಿದ್ದಾರೆ.

10. ದಿನಾಂಕ: 16-1-2018 ರಂದು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರ ಪರವಾಗಿ ಕಛೇರಿಯ ಸ್ಥಾನಿಕ ಸಹಾಯಕರಾದ ಶ್ರೀ ಬಿ.ಎಸ್. ರಮೇಶ ಇವರು ಖುದ್ದು ಹಾಜರಾಗಿ ವರದಿಯನ್ನು ಸಲ್ಲಿಸಿದ್ದು, ಪೌರಾಯುಕ್ತರು, ರಾಮನಗರ ನಗರ ಸಭೆ ಇವರು 1,505 ನಿಯಮಬಾಹಿರ ಖಾತೆಗಳನ್ನು ರದ್ದುಪಡಿಸಲು ಕ್ರಮ ತೆಗೆದುಕೊಂಡು ವರದಿಯನ್ನು ಸಲ್ಲಿಸಿದ್ದಾರೆ. ಇದಲ್ಲದೇ ಸುತ್ತೋಲೆಯನ್ನು ಸಹ ಹೊರಡಿಸಲಾಗಿದೆ. ಬೆಂಗಳೂರು ನಗರ ಹತ್ತಿರದ ಸಿ.ಎಂ.ಸಿ.ಗಳಲ್ಲಿ ಈ ರೀತಿ ಸಾಕಷ್ಟು ಅಕ್ರಮ ಖಾತೆಗಳು ಇವೆ ಅಂತ ತಿಳಿಸುತ್ತಾ ಎಲ್ಲಾ ಜಿಲ್ಲೆಗಳಿಂದ ಮಾಹಿತಿ ಸಂಗ್ರಹಿಸಲಾಗುತ್ತಿದೆ ಅಂತ ತಿಳಿಸಿದ್ದಾರೆ.

11. ದಿನಾಂಕ: 9-2-2018 ರಂದು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರ ಪರವಾಗಿ ಕಛೇರಿಯ ಸ್ಥಾನಿಕ ಸಹಾಯಕರಾದ ಶ್ರೀ ಬಿ.ಎಸ್. ರಮೇಶ ಇವರು ಖುದ್ದು ಹಾಜರಾಗಿ ವರದಿಯನ್ನು ಸಲ್ಲಿಸಿದ್ದು, ಆಗಿರಬಹುದಾದ ಅಕ್ರಮ ಖಾತೆಗಳ ಬಗ್ಗೆ ರಾಜ್ಯದ 6 ಜಿಲ್ಲೆಗಳ ಹಾಗೂ 7 ಮಹಾನಗರ ಪಾಲಿಕೆಗಳ ಮಾಹಿತಿ ಸ್ವೀಕೃತವಾಗಿದೆ. ಇನ್ನುಳಿದ 24 ಜಿಲ್ಲೆಗಳ ಹಾಗೂ 7 ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಆಗಿರಬಹುದಾದ ಅಕ್ರಮ ಖಾತೆಗಳ ಮಾಹಿತಿಯನ್ನು ಸಲ್ಲಿಸಲು ಒಂದು ತಿಂಗಳ ಕಾಲಾವಕಾಶವನ್ನು ಕೋರಿಕೊಂಡಿದ್ದರು. ಆದ್ದರಿಂದ, ಸದರಿ ಅಧಿಕಾರಿಗಳಿಗೆ ದಿನಾಂಕ: 23-2-2018 ರಂದು ಖುದ್ದು ಹಾಜರಾಗಲು ಸೂಚಿಸಲಾಗಿತ್ತು.

12. ದಿನಾಂಕ: 23-2-2018 ರಂದು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರು ಖುದ್ದು ಹಾಜರಾಗಿಲ್ಲ ಮತ್ತು ಯಾವುದೇ ವರದಿಯನ್ನು ಸಲ್ಲಿಸಿಲ್ಲ.

13. ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರ ಕಛೇರಿಯಿಂದ ಈಗಾಗಲೇ ಸಲ್ಲಿಕೆಯಾಗಿರುವ ವರದಿಯಂತೆ 4 ಜನ ಅಧಿಕಾರಿ/ಸಿಬ್ಬಂದಿಗಳ ವಿರುದ್ಧ ಇಲಾಖಾ ವಿಚಾರಣೆ ಪ್ರಾರಂಭಿಸಲಾಗಿದೆ. ರಾಮನಗರ ಜಿಲ್ಲೆ ವ್ಯಾಪ್ತಿಯಲ್ಲಿ 1,500 ಅಕ್ರಮ ಖಾತೆಗಳನ್ನು ರದ್ದುಪಡಿಸಲು ಪೌರಾಯುಕ್ತರು, ನಗರ ಸಭೆ, ರಾಮನಗರ ಇವರು ಕ್ರಮವನ್ನು ತೆಗೆದುಕೊಂಡಿರುತ್ತಾರೆ.

14. ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಈಗಾಗಲೇ ರಾಜ್ಯದ 30 ಜಿಲ್ಲೆಗಳ ಪೈಕಿ 6 ಜಿಲ್ಲೆಗಳ ಹಾಗೂ 7 ಮಹಾನಗರ ಪಾಲಿಕೆಗಳಿಂದ ಮಾಹಿತಿ ಸ್ವೀಕೃತವಾಗಿದ್ದು, ಇನ್ನುಳಿದ 24 ಜಿಲ್ಲೆಗಳಿಂದ ಹಾಗೂ 7 ಮಹಾನಗರ ಪಾಲಿಕೆಗಳ ಮಾಹಿತಿ ಇನ್ನು ಬಂದಿಲ್ಲ ಅಂತ ತಮ್ಮ ವರದಿಯಲ್ಲಿ ನಮೂದಿಸಿದ್ದಾರೆ. ದಿನಾಂಕ: 8-2-2018 ರಂದು, ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ವರದಿಯನ್ನು ಸಲ್ಲಿಸಿದ್ದಾರೆ. ಸದರಿ ವರದಿಯಲ್ಲಿ ಅಕ್ರಮ ಖಾತೆಗಳನ್ನು ರದ್ದುಗೊಳಿಸುವ ಬಗ್ಗೆ ಮತ್ತು ಅಕ್ರಮ ಖಾತೆಗಳನ್ನು ಗುರುತಿಸಿ ರದ್ದುಪಡಿಸಲು ಕ್ರಮ ಕೈಗೊಳ್ಳುತ್ತಿರುವ ಬಗ್ಗೆ ವಿವರಗಳನ್ನು ಸಲ್ಲಿಸಿದ್ದು, ಸದರಿ ವಿವರಗಳು ಈ ಕೆಳಕಂಡಂತೆ ಇರುತ್ತವೆ.

| ಕ್ರ. ಸಂ | ಜಿಲ್ಲೆಯ ಹೆಸರು | ನಿಯಮಬಾಹಿರ ಖಾತೆಗಳನ್ನು ರದ್ದುಪಡಿಸಲು ಗುರುತಿಸಿರುವ ಖಾತೆಗಳ ಸಂಖ್ಯೆ | ನಿಯಮಬಾಹಿರ ಖಾತಾ ವರ್ಗಾವಣೆಗಳನ್ನು ರದ್ದುಪಡಿಸಲು ಕೈಗೊಂಡಿರುವ ಕ್ರಮ |
|---|---|---|---|
| 01 | ಚಿಕ್ಕಬಳ್ಳಾಪುರ | 2943 | ಈಗಾಗಲೇ ಸಾರ್ವಜನಿಕ ಪ್ರಕಟಣೆಯನ್ನು ದಿನಾಂಕ.19.01.2018 ರಂದು ಪ್ರಕಟಿಸಿದ್ದು, ಹಾಗೂ ನಗರ ವ್ಯಾಪ್ತಿಯಲ್ಲಿ ಕರಪತ್ರದ ಮೂಲಕ ತಿಳುವಳಿಕೆಯನ್ನು ನೀಡಲಾಗಿದೆ ಹಾಗೂ ಸ್ಥಳೀಯ ದಿನ ಪತ್ರಿಕೆಯಲ್ಲಿ ದಿನಾಂಕ.28.02.2018ರವರೆಗೆ ಖಾತೆಯ ಮಾಲೀಕರು ತಮ್ಮ ಖಾತೆಗಳಿಗೆ ಸಂಬಂಧಿಸಿದ ಭೂಪರಿವರ್ತನೆ ಆದೇಶದ ಪ್ರತಿ ಹಾಗೂ ನಗರ ಯೋಜನಾ ಪ್ರಾಧಿಕಾರದ ಅನುಮೋದಿತ ನಕ್ಷೆ ಇತರೆ ಮೂಲ ದಾಖಲಾತಿಗಳನ್ನು ಮೇಲಿನ ದಿನಾಂಕದ ಅವಧಿಯೊಳಗೆ ಕಛೇರಿಗೆ ಹಾಜರುಪಡಿಸಲು ಖಾತೆ ಮಾಲೀಕರಿಗೆ ತಿಳಿಪಡಿಸಿ ಪ್ರಕಟಣೆ ಹೊರಡಿಸಲಾಗಿರುತ್ತದೆ |
| 02 | ಚಾಮರಾಜನಗರ | 1398 | ಚಾಮರಾಜನಗರ ನಗರಸಭೆಯ ಮಾಹಿತಿ ಮಾತ್ರ ಸ್ವೀಕೃತವಾಗಿರುತ್ತದೆ. ನಿಯಮಬಾಹಿರ ಖಾತಾ ವರ್ಗಾವಣೆಗಳನ್ನು ರದ್ದುಪಡಿಸಲು |

| | | | |
|---|---|---|---|
| | | | ಕ್ರಮವಹಿಸಲಾಗುವುದೆಂದು ವರದಿ ಸಲ್ಲಿಸಿರುತ್ತಾರೆ. |
| 03 | ಗದಗ | 4658 | ನರಗುಂದ ಪುರಸಭೆಯಲ್ಲಿ 4658 ನಿಯಮಬಾಹಿರ ಖಾತೆಗಳನ್ನು ಗುರುತಿಸಲಾಗಿದ್ದು, ರದ್ದುಪಡಿಸಲು ಕ್ರಮಕೈಗೊಂಡು ವರದಿ ಸಲ್ಲಿಸಲಾಗುವುದು.<br>ಶಿರಹಟ್ಟಿ ಪಟ್ಟಣ ಪಂಚಾಯಿತಿಯಲ್ಲಿ 29 ನಿಯಮಬಾಹಿರ ಖಾತೆಗಳನ್ನು ಗುರುತಿಸಲಾಗಿದ್ದು, ಸದರಿ ಆಸ್ತಿಗಳನ್ನು ರದ್ದುಪಡಿಸಲು ಜಿಲ್ಲಾಧಿಕಾರಿಗಳ ಕಛೇರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ |
| 04 | ಹಾಸನ | 196 | ಒಟ್ಟು 17 ನಿಯಮಬಾಹಿರ ಖಾತೆಗಳನ್ನು ರದ್ದುಪಡಿಸಲಾಗಿದೆ, ಇನ್ನುಳಿದ ನಿಯಮಬಾಹಿರ ಖಾತೆಗಳನ್ನು ವಾರ್ಡ್‌ವಾರು ಗುರುತಿಸುವ ಕಾರ್ಯ ಪ್ರಗತಿಯಲ್ಲಿದೆ. |
| 05 | ದಕ್ಷಿಣ ಕನ್ನಡ | 22 | ಕೋಟೆಕಾರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ 22 ನಿಯಮಬಾಹಿರ ಖಾತೆಗಳನ್ನು ರದ್ದುಮಾಡಲು ಖಾತೆದಾರರಿಗೆ ನೋಟೀಸ್ ನೀಡಲಾಗಿದೆ. |
| 06 | ಧಾರವಾಡ | ಯಾವುದೇ ನಿಯಮಬಾಹಿರ ಖಾತೆಗಳು ಇರುವುದಿಲ್ಲ | - |
| 07 | ಮಹಾನಗರಪಾಲಿಕೆ, ಬೆಳಗಾವಿ | ನಿಯಮಬಾಹಿರ ಖಾತೆಗಳ ಬಗ್ಗೆ ಪರಿಶೀಲನೆ ಮಾಡಲಾಗುತ್ತಿದ್ದು, ಈ ತಹಲ್‌ವರೆವಿಗೂ ಯಾವುದೇ ಖಾತೆಗಳು ಕಂಡು ಬಂದಿರುವುದಿಲ್ಲ | ಒಂದು ವೇಳೆ ನಿಯಮಬಾಹಿರ ಖಾತೆಗಳು ಕಂಡುಬಂದಲ್ಲಿ ನಿಯಮಾನುಸಾರ ರದ್ದುಪಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು. |
| 08 | ಮಹಾನಗರಪಾಲಿಕೆ, ಹುಬ್ಬಳ್ಳಿ-ಧಾರವಾಡ | ನಿಯಮಬಾಹಿರ ಖಾತೆಗಳ ಬಗ್ಗೆ ಪರಿಶೀಲನೆ ಮಾಡಲಾಗುತ್ತಿದ್ದು, ಈ ತಹಲ್‌ವರೆವಿಗೂ ಯಾವುದೇ ಖಾತೆಗಳು ಕಂಡು ಬಂದಿರುವುದಿಲ್ಲ | ಒಂದು ವೇಳೆ ನಿಯಮಬಾಹಿರ ಖಾತೆಗಳು ಕಂಡುಬಂದಲ್ಲಿ ನಿಯಮಾನುಸಾರ ರದ್ದುಪಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು. |
| 09 | ಮಹಾನಗರಪಾಲಿಕೆ, ವಿಜಯಪುರ | ಯಾವುದೂ ಇರುವುದಿಲ್ಲ. | ಈ ತಹಲ್‌ವರೆವಿಗೂ ನಿಯಮಬಾಹಿರ ಖಾತೆಗಳು ವರದಿಯಾಗಿರುವುದಿಲ್ಲ, ಅಂತಹ ಪ್ರಕರಣಗಳು ಕಂಡುಬಂದಲ್ಲಿ ನಿಯಮಾನುಸಾರ ರದ್ದುಪಡಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು. |

15. ದಿನಾಂಕ: 22-2-2018 ರಂದು, ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ವರದಿಯನ್ನು ಸಲ್ಲಿಸಿದ್ದಾರೆ. ಸದರಿ ವರದಿಯಲ್ಲಿ ಅಕ್ರಮ ಖಾತೆಗಳನ್ನು ರದ್ದುಗೊಳಿಸುವ ಬಗ್ಗೆ ಮತ್ತು ಅಕ್ರಮ ಖಾತೆಗಳನ್ನು ಗುರುತಿಸಿ ರದ್ದುಪಡಿಸಲು ಕ್ರಮ ಕೈಗೊಳ್ಳುತ್ತಿರುವ ಬಗ್ಗೆ ವಿವರಗಳನ್ನು ಸಲ್ಲಿಸಿದ್ದು, ಸದರಿ ವಿವರಗಳು ಈ ಕೆಳಕಂಡಂತೆ ಇರುತ್ತವೆ.

| ಕ್ರ.ಸಂ | ಜಿಲ್ಲೆಯ ಹೆಸರು | ನಿಯಮಬಾಹಿರ ಖಾತೆಗಳನ್ನು ರದ್ದುಪಡಿಸಲು ಗುರುತಿಸಿರುವ ಖಾತೆಗಳ ಸಂಖ್ಯೆ | ನಿಯಮಬಾಹಿರ ಖಾತಾ ವರ್ಗಾವಣೆಗಳನ್ನು ರದ್ದುಪಡಿಸಲು ಕೈಗೊಂಡಿರುವ ಕ್ರಮ |
|---|---|---|---|
| 01 | ರಾಮನಗರ | 8136 | 1. ರಾಮಗರ ನಗರಸಭೆಯಲ್ಲಿ 1505 ಖಾತೆಗಳನ್ನು ರದ್ದುಮಾಡಲಾಗಿದೆ.<br>2. ಚನ್ನಪಟ್ಟಣ ನಗರಸಭೆಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಕಛೇರಿಗೆ ಹಾಜರುಪಡಿಸಲು ಪತ್ರಿಕಾ ಪ್ರಕಟಣೆ ಮೂಲಕ ಹಾಗೂ ಸೂಕ್ತ ಹಿಂಬರಹವನ್ನು ನೀಡಿ ಕ್ರಮ ಕೈಗೊಳ್ಳಲಾಗುವುದು<br>3. ಕನಕಪುರ ನಗರಸಭೆಗೆ ಸಂಬಂಧಿಸಿದಂತೆ ನಿಯಮಬಾಹಿರ ಖಾತೆ ವರ್ಗಾವಣೆಗಳನ್ನು ಗುರುತಿಸುವ ಸಂಬಂಧ ದಾಖಲೆಗಳನ್ನು ಹಾಜರುಪಡಿಸುವಂತೆ ಸಾರ್ವಜನಿಕ ಪ್ರಕಟಣೆಯನ್ನು ಪ್ರಕಟಿಸಲಾಗಿರುತ್ತದೆ.<br>4. ಮಾಗಡಿ ಪುರಸಭೆಗೆ ಸಂಬಂಧಿಸಿದಂತೆ ಕರ್ನಾಟಕ ಪುರಸಭಾ ಕಾಯ್ದೆ1964ರ ಕಲಂ 322ರ ರೀತ್ಯಾ ನಿಯಮಬಾಹಿರ ಖಾತೆಗಳನ್ನು ರದ್ದುಪಡಿಸಲು ಕ್ರಮವಹಿಸಲಾಗಿರುತ್ತದೆ.<br>5.ಸದರಿ ಖಾತೆಗಳನ್ನು ಈಗಾಗಲೇ ಗುರುತಿಸಿದ್ದು, ನಿಯಮಬಾಹಿರ ಖಾತೆಗಳಿಗೆ ಸಂಬಂಧಪಟ್ಟಂತೆ ಅಗತ್ಯ ವಿವರ/ಷರಾಗಳನ್ನು ನಮೂದಿಸುವ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ನಿಯಮಾನುಸಾರ ಮುಂದಿನ ಕ್ರಮಕ್ಕಾಗಿ ಜಿಲ್ಲಾಧಿಕಾರಿಗಳು, ರಾಮನಗರ ರವರಿಗೆ ಸಲ್ಲಿಸಲಾಗಿರುತ್ತದೆ. |
| 02 | ಕೊಪ್ಪಳ | 9853 | 1.ಗಂಗಾವತಿ ನಗರಸಭೆಗೆ ಸಂಬಂಧಿಸಿದಂತೆ ಸದರಿ 34 ಖಾತೆಗಳನ್ನು ರದ್ದುಪಡಿಸುವ ಬಗ್ಗೆ ಕ್ರಮಕೈಗೊಳ್ಳಲಾಗಿರುತ್ತದೆ.<br>2.ಕುಷ್ಟಗಿ ಪುರಸಭೆಯಲ್ಲಿ 1156 ಪ್ರಕರಣಗಳನ್ನು ಗುರುತಿಸಿದ್ದು, ಪರಿಶೀಲಿಸಿ ಕ್ರಮಕೈಗೊಳ್ಳಲಾಗುತ್ತಿದೆ.<br>3.ಕನಕಗಿರಿ ಪಟ್ಟಣ ಪಂಚಾಯಿತಿಗೆ ಸಂಬಂಧಿಸಿದಂತೆ 2071 ಖಾತೆಗಳನ್ನು ರದ್ದುಪಡಿಸುವ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಮಾರ್ಗದರ್ಶನ ಕೋರಿ ಪತ್ರ ಬರೆಯಲಾಗಿರುತ್ತದೆ. |

| | | | |
|---|---|---|---|
| | | | 4. ತಾವರೆಗೆರ ಪಟ್ಟಣ ಪಂಚಾಯಿತಿಗೆ ಸಂಬಂಧಿಸಿದಂತೆ 4218 ಖಾತೆಗಳನ್ನು ರದ್ದುಪಡಿಸುವ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಮಾರ್ಗದರ್ಶನ ಕೋರಿ ಪತ್ರ ಬರೆಯಲಾಗಿರುತ್ತದೆ.<br>5. ಕುಕನೂರ ಪಟ್ಟಣ ಪಂಚಾಯಿತಿಗೆ ಸಂಬಂಧಿಸಿದಂತೆ 2071 ಖಾತೆಗಳನ್ನು ರದ್ದುಪಡಿಸುವ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಮಾರ್ಗದರ್ಶನ ಕೋರಿ ಪತ್ರ ಬರೆಯಲಾಗಿರುತ್ತದೆ. |
| 03 | ಚಿತ್ರದುರ್ಗ | 1703 | ಚಿತ್ರದುರ್ಗ, ಹಿರಿಯೂರು, ಚಳ್ಳಕೆರೆ ಮತ್ತು ನಾಯಕನಹಟ್ಟಿ ಸ್ಥಳೀಯ ಸಂಸ್ಥೆಗಳಲ್ಲಿ ನಿಯಮಬಾಹಿರ ಖಾತೆಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಹೊಸದುರ್ಗ ಪುರಸಭೆಯಲ್ಲಿ 64 ಖಾತೆಗಳನ್ನು ರದ್ದುಮಾಡಿ ಪುರಸಭೆಯ ಹೆಸರಿನಲ್ಲಿ ದಾಖಲಿಸಲಾಗಿರುತ್ತದೆ. |
| 04 | ಬಳ್ಳಾರಿ ಮಹಾನಗರಪಾಲಿಕೆ | 190 | - |
| 05 | ಮೈಸೂರು ಮಹಾನಗರಪಾಲಿಕೆ | ಯಾವುದೇ ನಿಯಮಬಾಹಿರ ಖಾತೆಗಳು ಇರುವುದಿಲ್ಲ. | - |

(ಎ) ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರು ಇನ್ನು ಬಾಕಿ ಉಳಿದ ಜಿಲ್ಲೆಗಳ ಮಾಹಿತಿಯನ್ನು ಸಂಗ್ರಹಿಸಿ ವರದಿಯನ್ನು ಸಲ್ಲಿಸಲು ಕಾಲಾವಕಾಶವನ್ನು ಕೋರಿದ್ದಾರೆ.

16. ಆದ್ದರಿಂದ, ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಮತ್ತು ಮಹಾನಗರ ಪಾಲಿಕೆಗಳಲ್ಲಿ ಆಗಿರುವ ಅಕ್ರಮ ಖಾತೆಗಳನ್ನು ಗುರುತಿಸಿ, ಮೂಲ ದಾಖಲಾತಿಗಳು ಇಲ್ಲದೇ ಇರುವ ಖಾತೆಗಳನ್ನು ರದ್ದುಪಡಿಸಲು ಕ್ರಮವಹಿಸುವಂತೆ ಮತ್ತು ಅಕ್ರಮ ಖಾತೆಗಳು ಆಗಲು ಕಾರಣರಾದ ಅಧಿಕಾರಿ/ಸಿಬ್ಬಂದಿಗಳನ್ನು ಸಹ ಗುರುತಿಸಿ ಅವರ ವಿರುದ್ಧ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಎದುರುದಾರರ ಶಿಸ್ತು ಪ್ರಾಧಿಕಾರಕ್ಕೆ ಮತ್ತು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(1) ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶಿಫಾರಸ್ಸು ಮಾಡಲಾಗಿದೆ.

17. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1)ರ ವರದಿಯಲ್ಲಿನ

ಶಿಫಾರಸ್ಸಿಗನುಗುಣವಾಗಿ ಕ್ರಮ ಕೈಗೊಂಡ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ತಿಳಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ